Indian Journal of History and Archaeology

ISSN (E):2582-225X
VOL-2, ISSUE -2, JULY-AUGUEST, 2020, 38-42

# ಬಾದಾಮಿ : ಸ್ಥಳನಾಮ – ಒಂದು ಐತಿಹಾಸಿಕ ವಿಶ್ಲೇಷಣೆ

**ಶ್ರೀಮತಿ. ಸುರೇಖಾ.ಕೊರ್ಲಹಳ್ಳಿ**

**ಶ್ರೀಮತಿ.ಸುರೇಖಾ.ಕೊರ್ಲಹಳ್ಳಿ**
ಸಂಶೋಧನಾರ್ಥಿ
ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ

ಕರ್ನಾಟಕದ ಪ್ರಾಚೀನ ರಾಜಕೀಯ ಇತಿಹಾಸದಲ್ಲಿ ಬಾದಾಮಿ ಚಲುಕ್ಯರದು ಅತ್ಯಂತ ಮುಖ್ಯವಾದ ಪಾತ್ರವಿದೆ. ಬಾದಾಮಿ ಚಲುಕ್ಯರು ಕರ್ನಾಟಕದ ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ ಹಾಗೂ ಆರ್ಥಿಕ ಪರಿಸ್ಥಿತಿಗಳ ಸರ್ವತೋಮುಖ ಅಭಿವೃದ್ಧಿಗೆ ಕಾರಣರಾದರು. ಆ ಕಾಲದಲ್ಲಿ ಭಾರತದ ರಾಜಕೀಯ ಭೂಪಟದಲ್ಲಿ ತಮ್ಮದೇ ಆದಂತಹ ಒಂದು ಹೊಸ ಅಧ್ಯಾಯವನ್ನು ಪ್ರಾರಂಭಿಸಿದರು. ಇವರು ರಾಜಕೀಯವಾಗಿ ಕರ್ನಾಟಕದಲ್ಲಿ ಪ್ರಗತಿ ಹೊಂದಿದ ಸಂದರ್ಭಕ್ಕಿಂತ ಮೊದಲು, ಬನವಾಸಿಯ ಕದಂಬರು, ರಾಜಕೀಯವಾಗಿ ಬನವಾಸಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಕೆ ನಡೆಸಿದ್ದರು. ಇವರು ಕರ್ನಾಟಕದ ಮೊಟ್ಟ ಮೊದಲ ಸ್ಥಳೀಯ ಕನ್ನಡ ಅರಸುಗಳೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಕದಂಬರು ಕ್ರಿ.ಶ. ೫೦೦ರ ಕಾಲಘಟ್ಟದಲ್ಲಿ ರಾಜಕೀಯವಾಗಿ ಶಕ್ತಿಗುಂದತೊಡಗಿದಾಗ, ಇತ್ತ ಬಾದಾಮಿಯಲ್ಲಿ ಚಲುಕ್ಯರು ರಾಜಕೀಯ ಅಸ್ತಿಭಾರ ಹಾಕಲು ಪ್ರಾರಂಭಿಸಿದ್ದರು. ಈ ಕಾಲದ ಭಾರತದ ಒಟ್ಟಾರೆ ರಾಜಕೀಯ ಚಟುವಟಿಕೆಗಳನ್ನು ಗಮನಿಸಿದಾಗ ಮಧ್ಯಭಾರತದಲ್ಲಿ ಗುಪ್ತರ ಮನೆತನ, ವಿದರ್ಭದಲ್ಲಿ ವಾಕಾಟಕರ ರಾಜಮನೆತನ, ಮಹಾರಾಷ್ಟ್ರದ ಎಲ್ಲೋರ ಪ್ರದೇಶದಲ್ಲಿ ಕಳಚೂರಿಗಳ ರಾಜಮನೆತನ, ಇತ್ತ ಆಂಧ್ರಪ್ರದೇಶದಲ್ಲಿ ವಿಷ್ಣು ಕುಂಡಿಗಳು ಹಾಗೂ ತಮಿಳುನಾಡಿನ ತೊಂಡ್ಯೆಮಂಡಲ (ಕಂಚೀಪುರಂ)ದಲ್ಲಿ ಪಲ್ಲವರು ಹಾಗೂ ಕರ್ನಾಟಕದ ಮೈಸೂರು ಪ್ರಾಂತ್ಯದಲ್ಲಿ ತಲಕಾಡಿನ ಗಂಗರು ಮತ್ತು ಕರ್ನಾಟಕದ ಕರಾವಳಿ ಭಾಗದಲ್ಲಿ ಆಳುಪ ರಾಜಮನೆತನಗಳು, ಇವುಗಳಲ್ಲದೇ ಇನ್ನೂ ಹಲವಾರು ಕಿರು ರಾಜಮನೆತನಗಳು ಆಳ್ವಕೆ ನಡೆಸುತ್ತಿದ್ದವು. ಪ್ರತಿಯೊಂದು ರಾಜಮನೆತನವು ತಮ್ಮ ರಾಜಕೀಯ ನೆಲೆಗಟ್ಟನ್ನು ಭದ್ರಪಡಿಸಿಕೊಳ್ಳಲು ಮತ್ತು

ರಾಜ್ಯ ವ್ಯಾಪಿ ್ತಗಳನ್ನು ವಿಸ್ತರಿಸಿಕೊಳ್ಳಲು ಅವಿರತವಾಗಿ ಪ್ರಯತ್ನಿಸುತ್ತಿದ್ದವು. ಇಂತಹ ಸಂದರ್ಭದಲ್ಲಿ ಮಲಪ್ರಭಾ ನದಿಗೆ ಹತ್ತಿರದಲ್ಲೇ ಇರುವ ರಕ್ಷಣಾ ದೃಷ್ಟಿಯಿಂದ ಸೂಕ್ತ ಆಯಕಟ್ಟಿನ ಸ್ಥಳವಾದ ವಾತಾಪಿಪುರದಲ್ಲಿ (ಬಾದಾಮಿ) ಚಲುಕ್ಯ ರಾಜಮನೆತನ ಉದಯಿಸಿತು.

ಚಲುಕ್ಯರ ರಾಜಧಾನಿಯಾಗಿ ಕ್ರಿ.ಶ.6,7 ಹಾಗೂ 8ನೆಯ ಶತಮಾನಗಳಲ್ಲಿ ವೈಭವದ ಉತ್ತುಂಗವನ್ನು ಆಸ್ವಾದಿಸಿದ ಬಾದಾಮಿ ನಗರವು ಸಾಂಸ್ಕೃತಿಕ ನೆಲೆಯಾಗಿತ್ತು. ಅದು ಮೊದಲ ಕನ್ನಡ ಸಾಮ್ರಾಜ್ಯದ  ಅಧಿಷ್ಠಾನವಾಗಿ, ಚಳುಕ್ಯರ, ಪಲ್ಲವರ, ರಾಷ್ಟ್ರಕೂಟರ, ಕಲ್ಯಾಣ ಚಾಳುಕ್ಯರ ನಂತರ ಕಳಚೂರಿಗಳ, ವಿಜಯನಗರ ಅರಸರ, ಆದಿಲ್ ಶಾಹಿಗಳ ಆಡಳತಕ್ಕೆ ಒಳಪಟ್ಟು ತದನಂತರ ಮರಾಠರ, ಆಮೇಲೆ ಹೈದರಾಲಿ ಹಾಗೂ ಟಿಪ್ಪು ಸುಲ್ತಾನನ ಆಳ್ವಕೆಗೆ ಒಳಪಟ್ಟು ಕೊನೆಗೆ ಬ್ರಿಟಿಷರ ಕಂಪನಿಯ ಆಳ್ವಕೆಗೆ ಸೇರಿತು. ಇಂತಹ ಸುಧೀರ್ಘವಾದ ಇತಿಹಾಸವನ್ನು ಹೊಂದಿರುವ ಬಾದಾಮಿ ನಾಡಿನ ಅಧ್ಯಯನ ಅತ್ಯಂತ ರೋಚಕವಾದದ್ದು ಹಾಗೂ ಶ್ರೇಷ್ಠವಾದದ್ದು. ಈ ನಾಡಿನ ಇತಿಹಾಸ ಎಷ್ಟು ಸುಧೀರ್ಘವೋ ಹಾಗೆ ಇದರ ಸ್ಥಳನಾಮ ಅಧ್ಯಯನವು ಕೂಡ ಅಷ್ಟೇ ರೋಚಕವೂ ಹಾಗೂ ಕುತೂಹಲಕಾರಿಯಾದದ್ದು ಆಗಿದೆ.

ಇಂದಿನ ಬಾದಾಮಿಯನ್ನು ಬಾದಾವಿ, ವಾತಾಪಿ, ಬಾದಾಮಿ ಕೋಟೆ, ಬಾದಾಮಿ ದುರ್ಗ  ಮುಂತಾದ ಹೆಸರುಗಳಂದ ಕರೆದಿರುವುದನ್ನು ಬಾಗಲಕೋಟೆ ಜಿಲ್ಲೆಯಲ್ಲಿ ದೊರೆತಿರುವ ಶಾಸನಗಳು ದೃಢಪಡಿಸುತ್ತವೆ. ಈ ರೀತಿಯಾದ ಸ್ಥಳನಾಮ ಬದಲಾವಣೆಗೆ ಐತಿಹಾಸಿಕ ಮತ್ತು ಸಾಮಾಜಿಕ ಸಂಗತಿಗಳು ಕಾರಣವಾಗುತ್ತವೆ. ಅದರ ಜೊತೆಗೆ ರಾಜ ಮಹಾರಾಜರು, ದಂಡನಾಯಕರು, ಸಾಮಂತರುಗಳು, ಮಹಾರಾಣಿಯರು ತಮ್ಮ ಹೆಸರನ್ನು ಚಿರಸ್ಥಾಯಿಗೊಳಸುವ ಸಲುವಾಗಿ ಊರುಗಳಗೆ ಹೊಸ ಹೆಸರನ್ನು ರೂಢಿಗೆ ತಂದಿರುವ ವಿಷಯಗಳನ್ನು ಶಾಸನಗಳು ಪ್ರತಿನಿಧಿಸುತ್ತವೆ. ಅದರ ಜೊತೆಗೆ ಭೌಗೋಳಕ ಅಂಶಗಳಾದ ಜಲ, ನೆಲ, ಭೂ ಸ್ಥಿತಿ, ಮಣ್ಣು, ಗುಡ್ಡ, ಸಸ್ಯವರ್ಗ, ಪ್ರಾಣಿವರ್ಗ ಇತ್ಯಾದಿ ನೈಸರ್ಗಿಕ ಸ್ವರೂಪಗಳು ಕೂಡ ಸ್ಥಳ ನಾಮಕರಣಕ್ಕೆ ಕಾರಣೀಭೂತವಾಗಿರುತ್ತವೆ.

ಹೆಸರುಗಳು ಒಂದು ಜನಾಂಗದ ಸಂಸ್ಕೃತಿಯ ಬೇರುಗಳು. ಸ್ಥಳಗಳ ಹೆಸರುಗಳೇ ಸ್ಥಳನಾಮಗಳು. ಇವುಗಳ ಅಧ್ಯಯನದಿಂದ ಆಯಾ ಕಾಲದ ಭಾಷೆಯ ಸ್ಥಿತಿಗತಿಗಳನ್ನು ನಿರ್ಣಯಿಸಲು ಜೊತೆಗೆ ಸಾಂಸ್ಕೃತಿಕ ವೈಶಿಷ್ಟತೆಗಳನ್ನು ಅರಿಯಲು ಮಹತ್ವಪೂರ್ಣ ಸಾಧನವಾಗಿ ಹೊರಹೊಮ್ಮುತ್ತವೆ. ಭಾಷೆ ನಿರಂತರವಾಗಿ ಪರಿವರ್ತನೆ ಹೊಂದುತ್ತಿರುತ್ತದೆ, ಅದಕ್ಕೆ ಕಾರಣ ಅನ್ಯ ಭಾಷಾ ಸಂಪರ್ಕ ಮತ್ತು ವಲಸೆಯಾಗಿದೆ. ಕನ್ನಡ ಭಾಷೆ ಮತ್ತು ಸಾಹಿತ್ಯದ ಮೇಲೆ ದಟ್ಟ ಪ್ರಭಾವ ಬೀರಿದ ಭಾಷೆಗಳಲ್ಲಿ ಸಂಸ್ಕೃತದ ಪ್ರಭಾವ ಹಿರಿದಾಗಿದೆ.

ಈ ಎಲ್ಲಾ ಭೌಗೋಳಿಕ, ಐತಿಹಾಸಿಕ, ಶಾಸನೋಕ್ತ ಹಾಗೂ ದಂತಕತೆಗಳ ಮೂಲಕ ಬಾದಾಮಿಯ ಸ್ಥಳನಾಮ ವಿವೇಚನೆ ಮಾಡುವ ಕಿರು ಪ್ರಯತ್ನವೇ ಈ ಪ್ರಬಂಧದ ಉದ್ದೇಶವಾಗಿದೆ. ಬಾದಾಮಿಯು ಬಾಗಲಕೋಟೆ ಜಿಲ್ಲೆಯ ಪ್ರಮುಖ ತಾಲೂಕು ಕೇಂದ್ರಗಳಲ್ಲಿ ಒಂದಾಗಿದ್ದು, ಜಿಲ್ಲಾ ಸ್ಥಳದಿಂದ 36 ಕಿ.ಮೀ. ದೂರದಲ್ಲಿದೆ. ಭೌಗೋಳಿಕವಾಗಿ ಬಾದಾಮಿ ಪರಿಸರವು ಕಲಾದಗಿ ವರ್ಗದ ಬಂಡೆಗಲ್ಲುಗಳಿಂದ ಆವೃತವಾಗಿದೆ. ಇಲ್ಲಿ ವಿಶೇಷವಾಗಿ ಕಂಡುಬರುವ ಶಿಲಾ ಪ್ರಕಾರಗಳೆಂದರೆ ಕ್ವಾರ್ಟಜೈಟ ಹಾಗೂ ಉಸುಕು ಕಲ್ಲುಗಳು. ಇವು ತುಸು ಕೆಂಪು ವರ್ಣದಾಗಿದ್ದು ಶಿಲ್ಪ ನಿರ್ಮಾಣಕ್ಕೆ ತುಂಬಾ ಯೋಗ್ಯವಾದುದರಿಂದ ಇತಿಹಾಸ ಕಾಲದ ಶಿಲ್ಪಿಗಳನ್ನು ಆಕರ್ಷಿಸಿ ಜಗತ್ಪ್ರಸಿದ್ಧ ಗುಹಾಲಯಗಳು ರಚನೆಗೊಂಡವು.

ಈ ಬಾದಾಮಿ ಪರಿಸರದಲ್ಲಿ ಪ್ರಾಗೈತಿಹಾಸಿಕ ಸಾ್ಂಸ್ಕೃತಿಕ ಕುರುಹುಗಳನ್ನು ಕೂಡ ಕಾಣಬಹುದು. ಢಾಣಕಶಿರೂರು, ಖ್ಯಾಡ, ಮೆಣಸಗಿ, ಸಿಡಿಲಫಡಿ ಇತ್ಯಾದಿ ಪ್ರದೇಶಗಳಲ್ಲಿ ಗವಿಚಿತ್ರಗಳು ಕಂಡುಬಂದಿವೆ. ಅಲ್ಲಿಯ ಬಂಡೆಗಳ ಗುಹೆಗಳು ಶಿಲಾಯುಗದ ಜನರಿಗೆ ವಾಸಸ್ಥಾನಗಳಾಗಿದ್ದವು ಎಂದು ಅಲ್ಲಿ ದೊರೆತ ಶಿಲಾ ಉಪಕರಣೆಗಳ ಮೂಲಕ ಇತಿಹಾಸಕಾರರು ಕಂಡು ಹಿಡಿದಿದ್ದಾರೆ. ಈ ಪ್ರದೇಶವನ್ನು ಹಲವಾರು ರಾಜ ಮನೆತನಗಳು ಆಳಿ ಇತಿಹಾಸ ಸೃಷ್ಠಿ ಮಾಡಿದ್ದಾರೆ. ಇದು ವ್ಯಾಪಾರಿ ಕೇಂದ್ರವಾಗಿ, ರಾಜಧಾನಿಯಾಗಿ, ವಾಸ್ತುಶಿಲ್ಪದ ಕೇಂದ್ರವಾಗಿ, ಕಲೆ ಸಾಹಿತ್ಯದ ಕೇಂದ್ರ ಬಿಂದುವಾಗಿ ಸುವರ್ಣಯುಗವನ್ನು ಅನುಭವಿಸಿದ ಪ್ರಾಚೀನ ಪಟ್ಟಣಗಳಲ್ಲಿ ಒಂದಾಗಿತ್ತು ಎಂದು ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ. ಬಾದಾಮಿಯ ಉಲ್ಲೇಖವನ್ನು ಮೊದಲ ಬಾರಿಗೆ ಟೋಲೆಮೆ ಬರೆದ, "ಎ ಗೈಡ್ ಟು ಜಿಯೋಗ್ರಾಫಿ" ಎಂಬ ಪುಸ್ತಕದಲ್ಲಿ ಆತ ಹೆಸರಿಸಿದ ಪ್ರಸಿದ್ಧ ದಕ್ಷಿಣ ಭಾರತದ ನಗರಗಳಲ್ಲಿ "ಬದಿಯಮಯೋಇಯ್" ಒಂದಾಗಿದೆ. ಇಂದಿನ ಬಾದಾಮಿಯೇ ಟೋಲೆಮಿ ಪ್ರಸ್ತಾಪಿಸಿದ ಬದಿಯಮಯೋಇಯ್ ಎಂದು ಪ್ರಸಿದ್ಧ ಇತಿಹಾಸಕಾರ ಮಕ್ರಿಂಡಲ್ ಗುರುತಿಸಿದ್ದಾರೆ.

ಈ ಊರನ್ನು ವಾತಾಪಿ ಎಂಬ ಹೆಸರಿನಲ್ಲಿ ಮೊದಲ ಬಾರಿಗೆ ಒಂದನೆಯ ಪೊಲೆಕೇಶಿಯ ಕ್ರಿ.ಶ. 543 ರ ಸಂಸ್ಕೃತ ಶಾಸನದಲ್ಲಿ  ಕಂಡುಬರುತ್ತದೆ. "ಹಿರಣ್ಯಗರ್ಭ ಸಮೂದತ ಶೃಲಿಕ್ಯೋ ವಲ್ಲಭೇಶ್ವರಃ, ಧರಾಧರೇಂದ್ರ ವಾತಾಪಿಮಜೇಯಮ್ಬೂತಯೇ ಭುವಃ,  ಅಧಸ್ತಾದುಪರಿಷ್ಟಾಚ್ಚ ದುಗ್ಗಮೇ ತದಚೀಕರತ್" ಎಂದು ವರ್ಣಿಸಲಾಗಿದೆ. ಅದರಂತೆ ಮತ್ತೆ ಕ್ರಿ.ಶ. 634ರ ಚಲುಕ್ಯರ ವಂಶಾವಳಿಯನ್ನು ತಿಳಿಸುವ ಬೃಹತ್ ಶಾಸನದಲ್ಲಿಯೂ ಕೂಡ ವಾತಾಪಿ ನಗರದ ಉಲ್ಲೇಖವಿದೆ.

ಶಾಸನೋಕ್ತವಾಗಿ ಬಾದಾಮಿಯ ಉಲ್ಲೇಖವು ಕ್ರಿ.ಶ.560ರ ತಾಮ್ರ ಶಾಸನದಲ್ಲಿ 12ನೆಯ ಶತಮಾನದ ಕಟಗೇರಿಯಲ್ಲಿ ದೊರೆತಿರುವ ವೀರಗಲ್ಲಿನ ಮೇಲೆ, ಕ್ರಿ.ಶ. 1139ರ ಪ್ರಸ್ತುತ ಬಾದಾಮಿಯ ಪುರಾತತ್ವ ಸಂಗ್ರಹಾಲಯದಲ್ಲಿರುವ ಕಲ್ಲಿನ ಮೇಲೆ, ಕ್ರಿ.ಶ. 1545 ರ ಕಾಲದ ಬಾದಾಮಿ ಕೋಟೆಗೆ ಹೋಗುವ

ದಾರಿಯಲ್ಲಿ ದೊರೆತ ಕಲ್ಲು ಗುಂಡಿನ ಮೇಲೆ ಹಾಗೂ ಬಾದಾಮಿಯ ಬತ್ತೇರಪ್ಪ (ಹನುಮಾನ್) ಗುಡಿಯ ಬಂಡೆಯ ಮೇಲೆ ದೊರೆತ ಕ್ರಿ.ಶ. 1340ರ ಶಾಸನಗಳಲ್ಲಿ ಬಾದಾಮಿಯ ಉಲ್ಲೇಖಗಳಿರುವುದು ಕಂಡುಬರುತ್ತದೆ. ಈ ಎಲ್ಲಾ ಶಾಸನಗಳಲ್ಲಿ 'ಬಾದಾಮಿ' ಎಂಬ ಸ್ಪಷ್ಟ ಉಲ್ಲೇಖವಿರುವುದು ಕಂಡುಬರುತ್ತದೆ.

ವಾತಾಪಿ ಎಂಬುದು ಏಕ ಪದವಿರದೇ ಅದು ವಾತ + ವಾಪಿ ಎಂಬ ಎರಡು ಶಬ್ದಗಳು ಸೇರಿ ಆಗಿರಬಹುದು. ವಾತ ಎಂಬುದು ಒಂದು ಬಗೆಯ ರೋಗವಾಗಿದ್ದು, ವಾಪಿ ಎಂದರೆ ನೀರು ಅಥವಾ ಜಲ ಎಂದು ಅರ್ಥೈಸಬಹುದಾಗಿದೆ. ಇದಕ್ಕೆ ಸರಿಯಾಗಿ ಬಾದಾಮಿಯ ಭೂತನಾಥ ದೇವಾಲಯದ ಬಳಿಯಿರುವ ಬಾವಿಯ ನೀರು ಔಷಧೀಯ ಗುಣಗಳನ್ನು ಹೊದಿತ್ತೆಂದು ಕೂಡ ಹೇಳಲಾಗುತ್ತದೆ. ಈ ಕಾರಣಕ್ಕಾಗಿ ವಾತಾಪಿ ಎಂಬುದು ಜಲಮೂಲದ ಹೆಸರಾಗಿದೆ ಎಂದು ಕೂಡ ವಿವರಣೆಯನ್ನು ಸ್ಥಳೀಯ ಜನರು ಹೇಳುತ್ತಾರೆ. ಇಷ್ಟೇ ಅಲ್ಲದೇ ಸ್ಥಳಪುರಾಣವಾದ ಶ್ರೀ ಮಹಾಕೂಟೇಶ್ವರ ಪುರಾಣದಲ್ಲಿ ವಾತಾಪಿ ಹಾಗೂ ಇಲ್ವಲರೆಂಬ ರಾಕ್ಷಸ ಸಹೋದರರು ಮಹಾಕೂಟದಲ್ಲಿದ್ದು ಅವರು ಲೋಕ ಕಂಟಕರಾಗಿದ್ದರಂದು, ಆಗ ಇಂದ್ರಾಂದಿ ದೇವತೆಗಳು ಅವರಿಂದ ರಕ್ಷಣೆ ಕೋರಿ ಬ್ರಹ್ಮ ದೇವನಲ್ಲಿಗೆ ಮೊರೆ ಹೋಗಲು, ಪರಿಹಾರ್ಥವಾಗಿ ಬ್ರಹ್ಮನು ಅಗಸ್ತ್ಯ ಮುನಿಯನ್ನು ಕಾಶಿಯಿಂದ ಕರೆದುಕೊಂಡು ಹೋಗಲು ಸೂಚಿಸುತ್ತಾನೆ. ರಾಕ್ಷಸರು ಬ್ರಾಹ್ಮಣ ವೇಷದಲ್ಲಿ ಬಂದು ಅಗಸ್ತ್ಯನನ್ನು ಶ್ರಾದ್ಧದ ಊಟಕ್ಕೆ ಬರಬೇಕಂದು ವಿನಂತಿಸಿಕೊಳ್ಳುತ್ತಾನೆ. ಒಪ್ಪಿಕೊಂಡ ಅಗಸ್ತ್ಯನಿಗೆ ಇಲ್ವಲನು ಅವನನ್ನು ಉಪಾಯವಾಗಿ ಕೊಲ್ಲಬೇಕೆಂದು ವಾತಾಪಿಯನ್ನು ಕೊಂದು ಮೌಂಸದ ಅಡಿಗೆಯನ್ನು ಮಾಡಿ ಉಣಬಡಿಸುತ್ತಾನೆ. ಎಲ್ಲವನ್ನು ಅರಿತ ತ್ರಿಕಾಲ ಜ್ಞಾನಿಯಾದ ಮಹಾಮುನಿ ಅಗಸ್ತ್ಯನು ಶಿವನ ಪಂಚಾಕ್ಷರಿ ಮಂತ್ರವನ್ನು ಜಪಿಸುತ್ತಾ, 'ವಾತಾಪಿ ಜೀರ್ಣೋಭವ' ಎನ್ನುತ್ತಾ ಊಟ ಮಾಡುತ್ತಾನೆ. ನಂತರ ಇಲ್ವಲನು ಆಕ್ರಮಣ ಮಾಡಿದಾಗ ಅವನನ್ನು ಕಾಲಿನಿಂದ ಒದ್ದು ಕೋಪಾಗ್ನಿಯ ಜ್ವಾಲೆಯಲ್ಲಿ ಸುಟ್ಟು ಹಾಕಿದನೆಂದು ಪ್ರತೀತಿಯಿದೆ.

ನೈಸರ್ಗಿಕವಾಗಿ ಬಾದಾಮಿ ಪರಿಸರದ ಶಿಲೆಗಳು ಬದಾಮ ಬಣ್ಣ ಅಂದರೆ ಹಾಲಿನ ಕೆನೆಯ ಬಣ್ಣದ್ದಾಗಿರುವುದರಿಂದ ಆ ಊರಿಗೆ ಬಾದಾಮಿ ಎಂದು ಕರೆದಿರಬಹುದೆಂದು ಕೆಲವರ ಅಭಿಪ್ರಾಯವಾಗಿದೆ. ಅದು ಅಲ್ಲದೇ ಬಾದಾಮಿ ಸಮೀಪದ ಬನಶಂಕರಿ ಅಥವಾ ಬನದೇವತೆಯಿಂದ ಆ ಊರಿಗೆ ಈ ಹೆಸರು ಬಂದಿರಬಹುದೆಂಬ ಅಭಿಪ್ರಾಯವನ್ನು ಡಾ.ಪಿ.ಬಿ ದೇಸಾಯಿ ಮತ್ತು ಡಾ.ಎಂ.ಚಿದಾನಂದ ಮೂರ್ತಿ ಅವರು ಹೇಳಿರುತ್ತಾರೆ. ದೈವ ನಾಮವೇ ಸ್ಥಳನಾಮವಾಗುವ ಪದ್ಧತಿ ನಮ್ಮ ದೇಶದಲ್ಲಿ ಪ್ರಸ್ತುತದಲ್ಲಿ ಇದ್ದಿರುವುದರಿಂದ ಆ ಸಾಧ್ಯತೆ ಕೂಡ ಇದೆ ಎಂದು ಹೇಳಬಹುದು. ಇದರ ಜೊತೆಗೆ ಬಾಧಾಂಬೆ ಎಂಬ ಸ್ತ್ರೀ ದೇವತೆಯ ನಾಮವೇ ಬಾದಾವಿ, ಬಾದಾವೆ, ಬಾದಾಮೆ, ಬಾದಾಮಿ ಎಂದು ರೂಪ ತಾಳಿರುವ ಭಾಷಾ ವೈಜ್ಞಾನಿಕ ಪ್ರಕ್ರಿಯೆಯನ್ನು ವಿವರಿಸಬಹುದು.

ಒಟ್ಟಾರೆಯಾಗಿ ಕರ್ನಾಟಕದ ಸಂಸ್ಕೃತಿಯ ಹಿರಿಮೆಯನ್ನು ಮೆರೆದ ಪ್ರಮುಖ ಪಟ್ಟಣಗಳಲ್ಲಿ ಬಾದಾಮಿ ಕೂಡ ಒಂದಾಗಿದೆ. ಚಲುಕ್ಯರ ರಾಜಧಾನಿಯಾಗಿ ಬಾಳಿ ಬೆಳಗಿದ ಐತಿಹಾಸಿಕ ಪಟ್ಟಣದ ನಾಮ ವಿಶ್ಲೇಷಣೆಯು ಆ ನಾಡಿನ ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಜೀವನವನ್ನು ತಿಳಿದುಕೊಳ್ಳಲು ಹೆಚ್ಚು ಅನುಕೂಲಕರವಾಗುತ್ತದೆ.

**ಗ್ರಂಥಋಣ:**

1. ದೇಸಾಯಿ ಪಿ.ಬಿ. : 1972, ದಿ ಹಿಸ್ಟರಿ ಆಫ್ ಕರ್ನಾಟಕ
2. Ramesh .K.V, Chalukyas of Vatapi, 1984, New Delhi.
3. ಶಾಸನ ಸಂಪುಟ-೯, ಬಾಗಲಕೋಟೆ ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
4. ಶೀಲಾಕಾಂತ ಪತ್ತಾರ, ಬಾದಾಮಿ –ಸಾಂಸ್ಕೃತಿಕ ಅಧ್ಯಯನ, 2018, ಕ.ವಿ.ವಿ, ಹಂಪಿ.
5. ಶಾಸನ ಸಂಪುಟ, ಬಾಗಲಕೋಟೆ ಜಿಲ್ಲೆ – ೯, ಕ.ವಿ.ವಿ. ಹಂಪಿ.
6. Epigraphica Indica XXVII , No. 2, and XXVIII, No. 10
7. South Indian Inscriptions – XI and XV.
8. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : ೯, ಬಾಗಲಕೋಟೆ ಜಿಲ್ಲೆ, ಪ್ರಸಾರಾಂಗ, ಕ.ವಿ.ವಿ. ಹಂಪಿ.
9. ಬಾಗಲಕೋಟೆ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, (ಸಂ) ಆರ್.ಗೋಪಾಲ, 2011, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.
10. ಸುಂದರ. ಅ. ಮಲಪ್ರಭೆ ಬಯಲಿನ ಪ್ರಾಚೀನ ಸಂಸ್ಕೃತಿ, ಒಂದು ಸಮೀಕ್ಷೆ, ಚಾಲುಕ್ಯ ಶ್ರೀ, 1982, ಬಾದಾಮಿ
11. ನಾರಾಯಣ. ಕೆ.ವೆ. ಸ್ಥಳನಾಮಗಳು ಪರಿವರ್ತನೆ ಮತ್ತು ಪ್ರಭಾವ, 1999, ಪ್ರಸಾರಾಂಗ, ಕ.ವಿ.ವಿ. ಹಂಪಿ.
12. .Ramesh K.V, ‘Pulakeshin II, His career and personality’, Chalukyas of Badami, 1978, Bangalore.